ತಿಂಗಳವರೆಗೆ ಅಗತ್ಯವಿರುವ ಮಡಿಲು ಕಿಟ್‌ಗಳನ್ನು ಸರಬರಾಜು ಮಾಡಲು ಈಗಾಗಲೇ ಖರೀದಿ ಆದೇಶ ನೀಡಲಾಗಿದೆ.

ಪ್ರೋತ್ಸಾಹ ಧನ ಬಿಡುಗಡೆಯಲ್ಲೂ ಸಹ ಸ್ವಲ್ಪ ವಿಳಂಬವಾಗಿದ್ದು, ಈಗ ಅದನ್ನು ಸರಿಪಡಿಸಲಾಗುತ್ತಿದೆ.

ಊ) ಈ ಔಷಧಿಗಳ ದಾಸ್ತಾನು ಇರುವುದಿಲ್ಲ.

ಋ) ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ತಾಲ್ಲೂಕು ಆರೋಗ್ಯ ಕೇಂದ್ರಗಳಲ್ಲಿ ಸುರಕ್ಷಿತ ಹೆರಿಗೆ ಮಾಡಲು ಅವಶ್ಯ ಇರುವ ಎಲ್ಲಾ ಪರಿಕರಗಳು ಲಭ್ಯವಿದೆ. ಉಳಿದಂತೆ ದಾಸ್ತಾನು ಇಲ್ಲದಿರುವ ಔಷಧಿಗಳನ್ನು ಎನ್.ಆರ್. ಹೆಚ್.ಎಂ. ಅಡಿಯಲ್ಲಿ ಒದಗಿಸಿರುವ ಮುಕ್ತ ನಿಧಿಯಿಂದ ಖರೀದಿಸಿ ಒದಗಿಸಿ ಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ವೈದ್ಯಕೀಯ ಶಿಕ್ಷಣಕ್ಕೆ ಧನ ಸಹಾಯ

851 (99) ಡಾ: ಹೆಚ್.ಸಿ. ಮಹದೇವಪ್ಪ (ಟಿ. ನರಸೀಪುರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ರೂ.25000–00ಗಳ ಸಹಾಯ ಧನ ನೀಡಲಾಗುವುದೇ;

ಆ) ಸರ್ಕಾರ ಘೋಷಿಸಿದ ದರದ ಅನ್ವಯ 2006–07ನೇ ಸಾಲಿನಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ರೂ.25000–00ಗಳ ಸಹಾಯ ಧನ ಪಾವತಿಸಲಾಗಿದೆಯೇ;

ಇ) ಈ ಬಗ್ಗೆ ಸರ್ಕಾರದ ಮುಂದಿನ ಕ್ರಮವೇನು?

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಉನ್ನತ ಶಿಕ್ಷಣ ವ್ಯಾಸಂಗಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ರೂ.25,000/– ಗಳ ಸಹಾಯ ಧನ ನೀಡುವ ಸರ್ಕಾರದ ನೀತಿ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಇಲ್ಲ. ಆದರೆ, 2006–07ನೇ ಸಾಲಿನಲ್ಲಿ ಎಂಬಿಬಿಎಸ್ ಮತ್ತು ಬಿಡಿಎಸ್ ವ್ಯಾಸಂಗಗಳಿಗೆ ಸಿ.ಇ.ಟಿ. ಮೂಲಕ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಕ್ರಮವಾಗಿ ರೂ.90,000 ಮತ್ತು ರೂ.80,000 ಗಳ ವಾರ್ಷಿಕ ರಿಯಾಯಿತಿ ನೀಡುವ ನೀತಿ ಇದೆ.

ಆ) 2006–07ನೇ ಸಾಲಿನಲ್ಲಿ ಎಂಬಿಬಿಎಸ್ ಮತ್ತು ಬಿಡಿಎಸ್ ವ್ಯಾಸಂಗಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ 2006–07, 2007–08 ಮತ್ತು 2008–09 ಸಾಲಿನವರೆಗೆ ಬಿಡುಗಡೆ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಇಲಾಖೆ SDS ಎಷ್ಟು ಅನುದಾನವನ್ನು ಒದಗಿಸಲಾಗಿದೆ.

852 (1288) ಡಾ: ಮಹಾದೇವಪ್ಪ ಹೆಚ್.ಸಿ. (ಟಿ. ನರಸೀಪುರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು 2009–10ನೇ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ The SDS Sanitarium at Rajiv Gandhi Tuerculsis Institute, The units of Kidwai Memorial Cancer Hospital and Jayadeva Cardiology Hospital of Bangalore, Krishna Rajendra Hospital- Mysore ಈ ಸಂಸ್ಥೆಗಳಿಗೆ ಒದಗಿಸಿದ ಅನುದಾನ ಎಷ್ಟು;

ಆ) ಸದರಿ ಸಂಸ್ಥೆಗಳಿಗೆ ಬಿಡುಗಡೆಯಾದ ಮೊತ್ತ ಹಾಗೂ ವೆಚ್ಚದ ವಿವರ ಒದಗಿಸುವುದು;

ಇ) ವೆಚ್ಚ ಮಾಡದೇ ಉಳಿದಿರುವ ಮೊತ್ತವೆಷ್ಟು (ವಿವರ ನೀಡುವುದು)?

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಎಸ್.ಡಿ.ಎಸ್. ಕ್ಷಯರೋಗ ಸಂಶೋಧನಾ ಸಂಸ್ಥೆ ಮತ್ತು ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ ಕಿದ್ವಾಯಿ ಸ್ಮಾರಕ – ರೂ. 3.00 ಕೋಟಿ